## <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## <u>ಸಿ.ಸಿ. ಸಂಖ್ಯೆ: 23/2020</u>

**ಸಾಕ್ಷಿಯನ್ನು ದಿ:02.04.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಎಸ್ ಗೋವಿಂದೇಗೌಡ | ಡಿ ಡಬ್ಲ್ಯೂ:2 |
| ತಂದೆಯ ಹೆಸರು | ಸಿಂಗ್ರೇಗೌಡ | |
| ವಯಸ್ಸು | 56 ವರ್ಷ | |
| ಉದ್ಯೋಗ | ಶಿಕ್ಷಕ | |
| ವಾಸಸ್ಥಳ | ಹುಣಸೂರು ಪಟ್ಟಣ | |

**<u>ಮುಖ್ಯ ವಿಚಾರಣೆ ಃ ಆರೋಪಿ ಪರ ಶ್ರೀ ಎಂ ಇ ಪಿ ವಕೀಲರಿಂದ ಃ</u>**

ನಾನು ಸರ್ಕಾರಿ ನೌಕರರ ಸಂಘದ ಅಧ್ಯಕ್ಷನಾಗಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ನನಗೆ ಓಲೆ ರವಿ ಎಂಬುವವರು ಗೊತ್ತು. ಆರೋಪಿಗೆ ಚೆಕ್ ಕೇಸ್ ನಲ್ಲಿ ವಾರೆಂಟ್ ಆಗಿತ್ತು. ಆ ಬಗ್ಗೆ ಆರೋಪಿ ನನ್ನ ಗಮನಕ್ಕೆ ತಂದರು. ನಾನು ಆರೋಪಿಯ ಬಳಿ ಠಾಣೆಗೆ ಹೋಗೋಣ, ಅಲ್ಲಿಗೆ ಕರೆಸೋಣ ಎಂದು ಹೇಳಿ ಠಾಣೆಗೆ ಹೋದೆವು. ಅಲ್ಲಿಗೆ ರವಿ ಎನ್ನುವವರು ಬಂದರು. ಆಗ ಪಿ ಎಸ್ ಐ ರವರು ಹೊರಗೆ ಹೋಗಿ ಕುಳಿತುಕೊಂಡು ತೀರ್ಮಾನ ಮಾಡಿ ಎಂದು ಹೇಳಿದರು. ಆ ಸಮಯದಲ್ಲಿ ಎನ್ ಕೆ ಮಹದೇವ ಎಂಬ ಪತ್ರಿಕಾ ವರದಿಗಾರರು ಇದ್ದರು. ಆ ಪ್ರಕಾರ ನಾವು ಕುಳಿತುಕೊಂಡು ಮಾತನಾಡಿ ರೂ 8,500/- ಕ್ಕೆ ತೀರ್ಮಾನಿಸಿದೆವು. ಆಗ ಮಹದೇವ ಎನ್ನುವವರು ನಾಳೆ ಹೋಗಿ ಹಣ ಕೊಟ್ಟು ನಿನ್ನ ಚೆಕ್ ನ್ನು ವಾಪಸ್ಸು ಪಡೆದುಕೋ ಎಂದು ಆರೋಪಿಗೆ ಹೇಳಿದರು. ಆಗ ಆರೋಪಿ ಹಣ ಕೊಡಲುಓಲೆ ರವಿರವರ ಮನೆಗೆ

ಹೋದರು. ಆಗ ಓಲೆ ರವಿರವರು ರೂ 8,500/- ಕ್ಕೆ ರೂ 50 ಸಾವಿರ ಚಕ್ರ ಬಡ್ಡಿ ಸೇರಿಸಿ ಕೊಡುವಂತೆ ಬೇಡಿಕೆ ಇಟ್ಟರು. ಆಗ ಆರೋಪಿ ಹಣ ಕೊಡದೇ ವಾಪಸ್ಸು ಬಂದರು.

**ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ ಎಂ ಇ ಎಂ ವಕೀಲರಿಂದಃ**

ನಾನು ಮತ್ತು ಆರೋಪಿ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಈ ಪ್ರಕರಣ ಯಾರ ಯಾರ ಮಧ್ಯೆ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ರವಿರವರು ಬೇರೆಯವರಿಂದ ಕೇಸು ಹಾಕಿಸಿದ್ದಾರೆ. ನನಗೆ ಫಿರ್ಯಾದುದಾರರಾದ ಮನುಕುಮಾರ ಗೊತ್ತು. ಅವರನ್ನು ನೋಡಿದ್ದೇನೆ. ದಿನಾಂಕ 10.05.2022 ರಂದು ಆರೋಪಿಯನ್ನು ವಾರೆಂಟ್ ನಲ್ಲಿ ಠಾಣೆಗೆ ಕರೆದುಕೊಂಡು ಹೋಗಿದ್ದರು. ನನ್ನನ್ನು ಪೊಲೀಸ್ ಠಾಣೆಗೆ ಆರೋಪಿ ಕರೆದುಕೊಂಡು ಹೋಗಿದ್ದರು. ಯಾವುದಾದರೂ ಚೆಕ್ಕಿನ ಪ್ರಕರಣದಲ್ಲಿ ನೀವು ಠಾಣೆಗೆ ಹೋಗಿ ತೀರ್ಮಾನಿಸಿ ಬರುತ್ತೀರಾ ಎಂದರೆ ಇಲ್ಲ. ಸರ್ಕಾರಿ ನೌಕರರು ಪೊಲೀಸ್ ಠಾಣೆಗೆ ಹೋಗಿ ಯಾವುದಾದರಾ ಪ್ರಕರಣವನ್ನು ತೀರ್ಮಾನಿಸಬಹುದೆಂದು ಕೆ ಸಿ ಎಸ್ ಆರ್ ನಲ್ಲಿ ಅವಕಾಶ ಇದೆಯೇ ಎಂದರೆ ಮಾನವೀಯತೆಯ ದೃಷ್ಠಿಯಿಂದ ಸರ್ಕಾರಿ ನೌಕರರನ ಸಲುವಾಗಿ ಹೋಗಿದ್ದೆ. ಈ ಪ್ರಕರಣ ದಾಖಲಾಗುವ ಮುಂಚಿತವಾಗಿ ನಾನು ಮಾತುಕತೆ ಮಾಡಿಲ್ಲ. ಠಾಣೆಗೆ ಹೋದಾಗ ರವಿ ಮತ್ತು ಫಿರ್ಯಾದುದಾರರು ಹಾಜರಿದ್ದರೇ ಎಂದರೆ ರವಿ ಮಾತ್ರ ಬಂದರು. ಫಿರ್ಯಾದುದಾರರ ಸಮಕ್ಷಮದಲ್ಲಿ ಏನಾದರೂ ಮಾತುಕತೆ ನಡೆಸಿದ್ದೀರಾ ಎಂದರೆ ಇಲ್ಲ. ಫಿರ್ಯಾದುದಾರರ ಜೊತೆ ಮಾತನಾಡಿದರೆ ಪ್ರಕರಣ ಏನಾದರೂ ಬಗೆಹರಿಯುತ್ತಿತ್ತು ಎಂದರೆ ರವಿರವರು ತಾನು ಮನುಕುಮಾರ ಮೂಲಕ ಪ್ರಕರಣ ದಾಖಲಿಸಿದ್ದೇನೆ ತನ್ನ ಜೊತೆ ಮಾತನಾಡುವಂತೆ ಹೇಳಿದ್ದರು. ಈ ಪ್ರಕರಣ ಮನುಕುಮಾರವರಿಗೆ ಸಂಬಂಧಿಸಿರುವುದರಿಂದ ಅವರ ಜೊತೆಯೇ ಮಾತನಾಡಬೇಕಾಗಿತ್ತು ಎಂದರೆ ಸರಿಯಲ್ಲ.

ರೂ.8,500/- ಕ್ಕೆ ತೀರ್ಮಾನವಾದ ಬಗ್ಗೆ ಏನಾದರು ಪತ್ರವನ್ನು ಅಥವಾ ಒಪ್ಪಿಗೆ ಪತ್ರವನ್ನು ಪೊಲೀಸ್ ಠಾಣೆಯಲ್ಲಿ ಬರೆಸಿಕೊಂಡಿದ್ದೀರಾ ಎಂದರೆ ಇಲ್ಲ. ರೂ.8,500/- ಕ್ಕೆ ತೀರ್ಮಾನ ಮಾಡಿದ್ದೇವೆ ಎಂಬ ಬಗ್ಗೆ ಠಾಣಧಿಕಾರಿಗೆ ಮಾಹಿತಿ ನೀಡಿ ಬರೆಸಿದ್ದೀರಾ ಎಂದರೆ ಬರೆಸಿಲ್ಲ ಆದರೆ ಮಾಹಿತಿ ನೀಡಿದ್ದೇವೆ. ಆರೋಪಿಯನ್ನು ಆ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆಯೇ ಎಂದರೆ ಇಲ್ಲ. ಈ ರೀತಿ ತೀರ್ಮಾನವಾಗಿದೆ ಎಂಬ ಬಗ್ಗೆ ಆರೋಪಿಯ ವಕೀಲರ ಮೂಲಕ ನ್ಯಾಯಾಲಯಕ್ಕೆ ಅರ್ಜಿ ಹಾಕಿಸಿದ್ದೀರಾ ಎಂದರೆ ಇಲ್ಲ. ನಾವು ಆ ದಿನ ಯಾವುದೇ ನ್ಯಾಯಪಂಚಾಯಿತಿ ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ಮನುಕುಮಾರರವರಿಗೆ ಸೇರಿದ್ದರಿಂದ ಅವರ ಜೊತೆಯೇ ಮಾತನಾಡಿ ಇತ್ಯರ್ಥ ಪಡಿಸಬೇಕಾಗಿತ್ತೇ ಹೊರತು ರವಿರವರ ಬಳಿ ಅಲ್ಲ ಎಂದರೆ ಸರಿಯಲ್ಲ. ಓಲೆ ರವಿ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಓಲೆ ರವಿರವರು ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.